ಅ) ಕರ್ನಾಟಕ ಮುನ್ಸಿಪಲ್ ಕಾರ್ಪೋರೇಷನ್ ಕಾಯ್ದೆ 1976ರ ಷೆಡ್ಯೂಲ್ 3 ಭಾಗ 2(5)ರ ಅನುಸಾರ ಪ್ರತಿ ಐದು ವರ್ಷಗಳಿಗೊಮ್ಮೆ ಕಂದಾಯ ಪರಿಷ್ಕರಣೆ ಮಾಡಬಹುದಾಗಿರುತ್ತದೆ. ಆದರೆ, 1972ರಿಂದ ಸಾಮಾನ್ಯ ಪರಿಷ್ಕರಣೆ ಮಾಡಿರುವುದಿಲ್ಲ.

ಇ) ಮನೆ ಕಂದಾಯವನ್ನು ಪದೇ ಪದೇ ಹೆಚ್ಚಿಸುವುದಿಲ್ಲ. ಮನೆಯ ತೆರಿಗೆ ವಾರ್ಷಿಕ ಮೌಲ್ಯದ ಶೇಕಡ 20 ಮತ್ತು ವಾಣಿಜ್ಯ ಕಟ್ಟಡಗಳ ಮೇಲೆ ಶೇಕಡಾ 25 ಸದ್ಯಕ್ಕೆ ಆಗಿರುತ್ತದೆ.

ಈ) ಬೆಂಗಳೂರು ನಗರದ ಎಲ್ಲಾ ವಾಣಿಜ್ಯ ಕಟ್ಟಡಗಳ ಕಂದಾಯ ಪರಿಷ್ಕರಣೆಯನ್ನು ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಸ್ವಾತಂತ್ರ ಯೋಧರಿಗೆ ನಿವೇಶನ ನೀಡಿಕೆ

1274 - ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಬೆಂಗಳೂರು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *ಕಳೆದ ಮೂರು ವರ್ಷಗಳಿಂದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಎಷ್ಟು ಬಿಡಿ ನಿವೇಶನಗಳನ್ನು ಸ್ವಾತಂತ್ರ ಯೋಧರಿಗೆ ಕೊಟ್ಟಿದ್ದಾರೆ? (ಅವರ ಹೆಸರುಗಳ ವಿವರ ನೀಡುವುದು)*
2. *ಈಗ ಆದರಲ್ಲಿ ಎಷ್ಟು ಜನ ಸ್ವಾಂತಂತ್ರ್ಯ ಯೋಧರಿಗೆ ನಿವೇಶನದ ಸ್ವಾಧೀನ ಕೊಡಲಾಗಿದೆ?*
3. *ಇನ್ನೂ ನಿವೇಶನ ಸ್ವಾಧೀನ ಕೊಡದವರಿಗೆ ಯಾವಾಗ ಕೊಡಲಾಗುವುದು?*
4. *ಸ್ವಾತಂತ್ರ್ಯ ಸುವರ್ಣ ಮಹೋತ್ಸವ ಈ ಸಂದರ್ಭದಲ್ಲಿ ಕೂಡಲೇ ಎಲ್ಲರಿಗೂ ನಿವೇಶನ ಕೊಡಲಾಗುವುದೇ?*

ಶ್ರೀ ಅನಂತ್‌ನಾಗ್ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು) :

1. ಕಳೆದ ಮೂರು ವರ್ಷಗಳಿಂದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು 14 ಜನ ಸ್ವಾತಂತ್ರ್ಯ ಯೋಧರಿಗೆ ಬಿಡಿ ನಿವೇಶನಗಳನ್ನು ಹಂಚಿಕೆ ಮಾಡಿರುತ್ತಾರೆ. (ಅವರ ಹೆಸರುಗಳ ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ)

2. ಇಬ್ಬರು ಸ್ವಾತಂತ್ರ್ಯ ಯೋಧರಿಗೆ ನಿವೇಶನದ ಸ್ವಾಧೀನ ಪತ್ರವನ್ನು ನೀಡಲಾಗಿದೆ.

3. ನಿವೇಶನ ಮೌಲ್ಯ ಪಾವತಿಸುವುದು, ಗುತ್ತಿಗೆ ಕರಾರುಪತ್ರ ನೋದಾಯಿಸುವುದು ಮುಂತಾದ ಅವಶ್ಯ ಕ್ರಮಗಳು ಪೂರ್ಣಗೊಂಡ ನಂತರ ಉಳಿದ ಹಂಚಿಕೆದಾರರಿಗೆ ನಿವೇಶನದ ಸ್ವಾಧೀನ ಕೊಡಲಾಗುವುದು.

4. ಸರ್ಕಾರವು ಹೊರಡಿಸಿರುವ ಪರಿಷ್ಕೃತ ಮಾರ್ಗಸೂಚಿಯಲ್ಲಿ ಶೇಕಡ 5ರಷ್ಟು ಬಿಡಿ ನಿವೇಶನಗಳನ್ನು ಸ್ವಾತಂತ್ರ್ಯ ಯೋಧರಿಗೆ ಹಂಚಿಕೆ ಮಾಡಲು ಅವಕಾಶ ಕಲ್ಪಿಸಲಾಗಿದೆ. ದಿನಾಂಕ 31.3.98ರ ವರೆಗೆ ಸುಮಾರು 735 ಅರ್ಜಿಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು

ಸ್ವೀಕರಿಸಿರುತ್ತದೆ. ಮಾರ್ಗಸೂಚಿಯಲ್ಲಿ ಕಾಯ್ದಿರಿಸಿರುವಷ್ಟು ನಿವೇಶನಗಳನ್ನು ಹಂಚಿಕೆ ಮಾಡಲು ತೀರ್ಮಾನ ತೆಗೆದುಕೊಳ್ಳಲು ಈ ಅರ್ಜಿಗಳನ್ನು ಬಿಡಿ ನಿವೇಶನ ಹಂಚಿಕೆ ಸಮಿತಿಯ ಮುಂದೆ ಮಂಡಿಸಲಾಗುವುದು.

ಅನುಬಂಧ

ದಿನಾಂಕ 1.4.1995 ರಿಂದ 31.3.1998ರ ಅವಧಿಯಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಬಿಡಿ ನಿವೇಶನ ಹಂಚಿಕೆ ಪಡೆದ ಸ್ವಾತಂತ್ರ ಯೋಧರ ಪಟ್ಟಿ :

ಶ್ರೀಯುತರು :

1. ಪಿ. ಚೆನ್ನಾರೆಡ್ಡಿ
2. ಹೆಚ್.ಕೆ. ಸಿದ್ದಲಿಂಗ ಶಾಸ್ತ್ರಿ
3. ಸಿ.ಆರ್. ಸುಬ್ಬಮ್ಮ
4. ಡಿ.ಜೆ. ನಾಯಿಡು
5. ಎಂ. ಮುನಿಸ್ವಾಮಯ್ಯ
6. ಕಾಶಿರಾವ್ ಪಾಟೀಲ್
7. ಅನಂತಚಾರ್ಯ
8. ಕೆ. ವೆಂಕಟ ಕೃಷ್ಣಪ್ಪ
9. ಎಂ. ನಂಜಪ್ಪ
10. ಟಿ.ಎಸ್. ಶ್ರೀರಂಗಾಚಾರ್
11. ಎಸ್. ನಂಜಪ್ಪ
12. ಬಸಪ್ಪ ಎನ್.ಕೋಡಿಗೌಡ
13. ಬಿ.ಎಂ. ಸಿದ್ದೇಗೌಡ
14. ಎನ್.ವಿ. ನಾರಾಯಣ ರಾವ್

ವಿಚಾರಣಾ ಆಯೋಗಗಳ ರಚನೆ

1275 - ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಐದು ವರ್ಷಗಳಲ್ಲಿ ರಾಜ್ಯ ಸರ್ಕಾರವು ರಚಿಸಿರುವ ವಿಚಾರಣಾ ಆಯೋಗಗಳ ಸಂಖ್ಯೆ ಎಷ್ಟು? (ಇಲಾಖಾವಾರು, ವಿಷಯವಾರು ಮಾಹಿತಿ ನೀಡುವುದು)

ಆ) ಹಾಗಿದ್ದಲ್ಲಿ ಈ ಆಯೋಗಗಳ ರಚನೆಯಾದ ನಂತರ ಸರ್ಕಾರಕ್ಕೆ ತಗಲಿರುವ ವೆಚ್ಚ ಎಷ್ಟು?

ಇ) ಆ ಆಯೋಗಗಳು ರಚನೆಯಾದ ನಂತರ ಸರ್ಕಾರಕ್ಕೆ ತನ್ನ ವರದಿಯನ್ನು ಸಲ್ಲಿಸಲಿಕ್ಕೆ ತೆಗೆದುಕೊಂಡ ಕಾಲಾವಧಿ ಎಷ್ಟು?

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯ ಮಂತ್ರಿಗಳು) :

ಅ) 10 (ಹತ್ತು). ಇಲಾಖಾವಾರು, ವಿಷಯವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.